# ಪ್ರಹಸನ ಪ್ರಸಂಗ

**ಅನೇಕ ವೇಳೆ ನಾವು ಇತರರಿಗೆ ಸೇವೆ ಮಾಡುವುದು ಇತರರ ಹಿತದೃಷ್ಟಿಯಿಂದಲ್ಲ, ನಮ್ಮದೇ ಆದ ಸ್ವಂತ ಕಾರಣಗಳಿಗಾಗಿ. ಆಗ ಇತರರ ಆವಶ್ಯಕತೆಗಿಂತ ನಮ್ಮ ಆವಶ್ಯಕತೆಯೇ ಪ್ರಧಾನ ವಾಗುತ್ತದೆ. ಇತರರ ಸೇವೆ ನಮ್ಮ ಅಹಂಕಾರದ ಪುಷ್ಟಿಯಾಗುತ್ತದೆ. ಅದರಲ್ಲೂ ವಿಶೇಷವಾಗಿ ನಾವು ಇತರರಿಗೆ ಬೋಧಿಸುವುದರಿಂದ ನಮ್ಮ ಅಹಂಕಾರದ ಪೋಷಣೆಯೇ ಹೆಚ್ಚಾಗುತ್ತದೆ—ಅದೇ ಹೆಚ್ಚು ಪ್ರಧಾನವಾಗಿರುತ್ತದೆ.**

ಒಬ್ಬ ಧರ್ಮಬೋಧಕನಿದ್ದ. ಅವನು ಒಂದು ಪ್ರದೇಶಕ್ಕೆ ಧರ್ಮಪ್ರಚಾರಕ್ಕೆ ಹೋಗಿದ್ದ. ಅಲ್ಲಿ ಯಾರೂ ಶ್ರೋತೃಗಳೇ ಇರಲಿಲ್ಲ. ಒಬ್ಬ ದನ ಕಾಯುವವನು ಮಾತ್ರ ಕುಳಿತುಕೊಂಡಿದ್ದ. ಯಾರಾದರೂ ಬರಬಹುದೆಂದು ತುಂಬ ಹೊತ್ತು ಕಾದದ್ದಾಯಿತು. ಯಾರೂ ಬರಲಿಲ್ಲ. ಧರ್ಮಬೋಧಕನಿಗೆ ತುಂಬ ನಿರಾಸೆಯಾಯಿತು. ಈಗ ಏನು ಮಾಡಬೇಕೆಂಬುದು ಅವನಿಗೆ ತೋಚಲಿಲ್ಲ.

ಅಲ್ಲಿ ಕುಳಿತಿದ್ದ ದನಗಾಹಿಯನ್ನು ಅವನು ವಿಚಾರಿಸಿದ : "ಈಗ ನೀನೊಬ್ಬನೇ ಇದ್ದೀಯೆ. ಬೇರೆ ಯಾರೂ ಶ್ರೋತೃಗಳೇ ಇಲ್ಲ. ನಾನು ತುಂಬ ದೂರದಿಂದ ಬಂದಿದ್ದೇನೆ. ಈಗ ನಾನು ಉಪನ್ಯಾಸ ಮಾಡಬೇಕೆ ಬೇಡವೆ?"

ದನಗಾಹಿ : "ನಾನು ಒಬ್ಬ ಸಾಮಾನ್ಯ ಮನುಷ್ಯ. ಉಪನ್ಯಾಸದ ಬಗ್ಗೆ ನನಗೇನೂ ತಿಳಿಯದು. ಆದರೆ ಒಂದು ವಿಷಯ ನಾನು ಹೇಳಬಲ್ಲೆ. ನಾನು ನೂರು ದನಗಳಿಗಾಗಿ ಹುಲ್ಲನ್ನು ತೆಗೆದುಕೊಂಡು ಹೋಗುತ್ತೇನೆ ಎಂದಿಟ್ಟುಕೊಳ್ಳಿ. ಅಲ್ಲಿ ಒಂದೇ ದನ ಇರುತ್ತದೆ. ಬೇರೆ ದನಗಳು ಇಲ್ಲ ಎಂದು ಆ ಒಂದು ದನಕ್ಕೆ ಹುಲ್ಲನ್ನು ತಿನ್ನಿಸು ವುದನ್ನು ನಾನು ಬಿಡುವುದಿಲ್ಲ."

ಇದರ ಸೂಚ್ಯಾರ್ಥವನ್ನು ಗ್ರಹಿಸಿದ ಬೋಧಕನು ಆ ಒಬ್ಬ ದನಗಾಹಿಗಾಗಿ ತನ್ನ ಉಪನ್ಯಾಸವನ್ನು ಪ್ರಾರಂಭಿಸಿದ. ತಾನು ಸಿದ್ಧತೆ ಮಾಡಿಕೊಂಡುಬಂದ ವಿಷಯವನ್ನೆಲ್ಲ ಹೇಳುತ್ತ ಪೂರ್ಣ ಒಂದು ಗಂಟೆ ಉಪನ್ಯಾಸ ಬಿಗಿದ. ಮುಗಿದ ಮೇಲೆ "ಉಪನ್ಯಾಸ ಹೇಗಿತ್ತು?" ಎಂದು ದನಗಾಹಿಯನ್ನು ಕೇಳಿದ. ಅವನು ಏದುಸಿರು ಬಿಡುತ್ತ ಹೇಳಿದ : "ನನಗೆ ಉಪನ್ಯಾಸದ ಬಗ್ಗೆ ಏನೂ ತಿಳಿಯದು. ಆದರೆ ಒಂದು ವಿಷಯ. ನಾನು ನೂರು ಹಸುಗಳಿಗಾಗಿ ಹುಲ್ಲನ್ನು ತೆಗೆದುಕೊಂಡು ಹೋಗಿ ಅಲ್ಲಿ ಒಂದೇ ಹಸು ಇದ್ದರೆ ನೂರು ಹಸು ಗಳ ಹುಲ್ಲನ್ನು ಒಂದೇ ಬಾರಿ ಆ ಹಸುವಿಗೆ ತಿನ್ನಿಸುವುದಿಲ್ಲ."

ooo

**ಜನರು ಒಂಟಿತನವನ್ನು ಇಷ್ಟಪಡುವುದಿಲ್ಲ. ಮಕ್ಕಳು ಉಪೇಕ್ಷಿಸಲ್ಪಡುವುದಕ್ಕಿಂತ ಬೈಗಳು ಪೆಟ್ಟುಗಳನ್ನು ಇಷ್ಟ ಪಡು ತ್ತಾರೆ. ಯಾವುದಾದರೊಂದು ರೀತಿಯಲ್ಲಿ ಜನರು ತಮ್ಮ ಕಡೆ ಗಮನ ಹರಿಸಬೇಕೆಂದು ಬಯಸುತ್ತಾರೆ. ಈ ದೃಷ್ಟಿಯಿಂದ ಸುಖ್ಯಾತಿ ಕುಖ್ಯಾತಿ ಎರಡೂ ಒಂದೇ.**

ಪತಿ ಪತ್ನಿಗೆ ಹೇಳಿದ : "ಇಂದು ನನ್ನ ಮನಸ್ಸಿಗೆ ತುಂಬ ದುಗುಡ ಉಂಟಾಗಿದೆ."

ಪತ್ನಿ : "ಏನು ಕಾರಣ? ಮೈ ಸರಿಯಿಲ್ಲವೇ?"

ಪತಿ: "ಹಾಗೇನಿಲ್ಲ. ಒಂದು ರೀತಿಯ ಒಂಟಿತನದ ಭಾವನೆ, ನಾನು ಅನುಪಯುಕ್ತ ಎಂಬ ಭಾವನೆ ನನ್ನನ್ನು ತುಂಬ ಕಾಡುತ್ತಿದೆ."

ಪತ್ನಿ : "ನೀವು ಒಂಟಿತನವನ್ನು ಅನುಭವಿಸಬೇಕಾಗಿಲ್ಲ. ಕಾರಣ ಅನೇಕರು ನೀವು ಅನುಪಯುಕ್ತರು ಎಂದು ನಿಮ್ಮ ಬಗ್ಗೆ ಭಾವಿಸು ತ್ತಾರೆ."

ooo

**ಎಷ್ಟೋ ಜನರಿಗೆ ತಿಳುವಳಿಕೆ ಬರುವುದು ತುಂಬ ನಿಧಾನ. ಎಷ್ಟೋ ಕಹಿ ಅನುಭವಗಳಾಗುತ್ತಿದ್ದರೂ ಅವರು ಬುದ್ಧಿ ಕಲಿಯು ವುದಿಲ್ಲ. ಆಮೆಯ ಗತಿಯಲ್ಲಿ ಸಾಗುವ ಅವರಿಗೆ ಜ್ಞಾನೋದಯ ಆಗುವ ಹೊತ್ತಿಗೆ ಎಷ್ಟೋ ಅನಾಹುತಗಳಾಗಿರುತ್ತವೆ.**

ಒಮ್ಮೆ ಕಾಡಿನಲ್ಲಿ ಮೃಗಪತಿ ಸಿಂಹ ತನ್ನ ಪ್ರಜೆಗಳನ್ನೆಲ್ಲ ಒಂದು ಕಡೆ ಬರಮಾಡಿಕೊಂಡು ಅವುಗಳಿಗೆ ಹೇಳಿತು : "ನೋಡಿ, ನಿಮ್ಮಲ್ಲಿ ಪ್ರತಿಯೊಬ್ಬರೂ ಒಂದೊಂದು ಜೋಕನ್ನು ಹೇಳಬೇಕು. ಆದರೆ ಯಾರಾದರೂ ನಿಮ್ಮ ಜೋಕಿಗೆ ನಗದೆ ಇದ್ದರೆ ಜೋಕನ್ನು ಹೇಳಿದವನನ್ನು ತಕ್ಷಣ ಕೊಂದುಬಿಡುತ್ತೇನೆ. ಈಗ ಮಂಗನ ಸರದಿ, ನೀನು ಹೇಳು ಒಂದು ಜೋಕನ್ನು."

ಮಂಗ ನಡುಗುತ್ತ ಒಂದು ಹಾಸ್ಯಪ್ರಸಂಗವನ್ನು ಪ್ರಾರಂಭಿಸಿತು. ಅದನ್ನು ಮುಗಿಸುತ್ತಿದ್ದಂತೆಯೆ ಎಲ್ಲ ಪ್ರಾಣಿಗಳು ನಗತೊಡಗಿದವು. ಆಮೆಯು ಮಾತ್ರ ನಗಲೇ ಇಲ್ಲ. "ಆಮೆಯು ನಗಲೇ ಇಲ್ಲ" ಎಂದು ಆರ್ಭಟಿಸುತ್ತ ಸಿಂಹವು ಮಂಗನನ್ನು ಮರ್ದಿಸಿತು.

ಈಗ ಆನೆಯ ಸರದಿ. ಅದು ಒಂದು ಹಾಸ್ಯಪ್ರಸಂಗವನ್ನು ಪ್ರಾರಂಭಿಸಿತು. ಅದು ಮುಗಿಯುವ ಹೊತ್ತಿಗೆ ಎಲ್ಲ ಪ್ರಾಣಿಗಳೂ ಬಿದ್ದು ಬಿದ್ದು ನಗತೊಡಗಿದವು. ಆದರೆ ಆಮೆಯು ಮಾತ್ರ ಸುಮ್ಮನೆ ಇತ್ತು. ಆನೆಯು ಅತ್ಯಂತ ಕೋಪದಿಂದ ಅದನ್ನು ಅಪ್ಪಳಿಸ ಬೇಕೆನ್ನುವಷ್ಟರಲ್ಲಿಯೆ ಸಿಂಹವು ಆನೆಯ ಮೇಲೆರಗಿ ಅದನ್ನು ಕೊಂದು ಹಾಕಿತು.

ಈಗ ಸಿಂಹವು ಹುಲಿಯನ್ನು ಕುರಿತು, "ಈಗ ನೀನು ಒಂದು ಜೋಕು ಹೇಳು" ಎಂದಿತು. ಹುಲಿಯು ಪ್ರಾರಂಭಿಸುವಷ್ಟರಲ್ಲಿಯೇ ಆಮೆಯು ಜೋರಾಗಿ ನಗತೊಡಗಿತು.

ಸಿಂಹ : "ಇದೇನು ಆಮೆ, ಇನ್ನೂ ಹುಲಿ ಹಾಸ್ಯಪ್ರಸಂಗ ಮುಗಿಸು ವುದರೊಳಗೇ ನೀನು ನಗುತ್ತಿರುವೆಯಲ್ಲ?"

ಆಮೆ : "ಮಂಗನು ಹೇಳಿದ ಜೋಕು ತುಂಬ ಹಾಸ್ಯ ಮಯವಾಗಿದೆ."